ಸಿ.ಸಿ .ನಂ. 96/2022 ಪಿಡಬ್ಲೂಃ 3

ದಿನಾಂಕಃ 07-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

4. ನಮ್ಮ ಅಂಚೆ ಕಚೇರಿಗೆ ಯಾವುದಾದರೂ ಆರ್ಟಿಕಲ್ ಗಳು ಬಂದಾಗ ನಮ್ಮ ಸಬ್ ಕಚೇರಿಯವರು ಅಂತಹ ಅಂಚೆಗಳ ಆ ದಿನ ಬಂದಂತಹ ಎಲ್ಲಾ ಅಂಚೆಗಳ ಲಿಸ್ಟನ್ನು ಕೊಡುತ್ತಾರೆ ಎಂದರೆ ಸರಿ . ಅದು ಪ್ರಿಂಟ್ ಆಗಿ ಬರುತ್ತದೆ ಎಂದರೆ ಸರಿ . ಅಂತಹ ದಾಖಲೆಗಳ ಮೇಲೆ ನಾವು ಯಾರಿಗೆ ಜಾರಿ ಮಾಡಿರುತ್ತೇವೆ ಅವರ ಸಹಿಯನ್ನು ಪಡೆಯಬೇಕಾಗುತ್ತದೆ ಎಂದರೆ ಸರಿ . ಈಗ ಪೋಸ್ಟಮನ್ ಬುಕ್ ಲ್ಲಿ ಎಂಟ್ರಿ ಮಾಡುತ್ತಿಲ್ಲ. ಮೊದಲು ಪೋಸ್ಟಮನ ಬುಕ್ ಲ್ಲೂ ಕೂಡ ಎಂಟ್ರಿ ಮಾಡುತ್ತಿದ್ದೆವು ಎಂದರೆ ಸರಿ . ಕಂಪ್ಯೂಟರ್ ಬಂದ ನಂತರ ಲಿಸ್ಟ ಕೊಡುತ್ತಾರೆ , ಕಾರಣ ಪೋಸ್ಟಮನ್ ಬುಕ್ ನಲ್ಲಿ ಎಂಟ್ರಿ ಮಾಡುತ್ತಿಲ್ಲ. ಒಂದುವೇಳೆ ವಿಳಾಸದಾರರು ವಿಳಾಸದಲ್ಲಿ ಇಲ್ಲದೇ ಇದ್ದರೆ ಹಾಗೂ ರಿಡೈರೆಕ್ಟ ಮಾಡಲಾಗಿದ್ದರೆ ಆ ಬಗ್ಗೆ ಲಿಸ್ಟನಲ್ಲಿ ಅಥವಾ ಪೋಸ್ಟಮೆನ್ ಬುಕ್ ನಲ್ಲಿ ನಮೂದಿಸಬೇಕು ಎಂದರೆ ಸರಿ . ರಿಡೈರೆಕ್ಟ ಮಾಡಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ದಾಖಲಾತಿ ಮೂರು ವರ್ಷಗಳವರೆಗೆ ಮಾತ್ರ ನಮ್ಮ ಕಸ್ಟಡಿಯಲ್ಲಿ ಇಟ್ಟುಕೊಳ್ಳಲು ಅನುಮತಿ ಇದೆ , ಅದರ ನಂತರ ಕುಮಟಾ ಹೆಡ್ ಆಫೀಸ್ ಗೆ ಕಳುಹಿಸುತ್ತೇವೆ . ಕಳಿಸಿದ ಬಗ್ಗೆ ನಮ್ಮಲ್ಲಿ ದಾಖಲಾತಿ ಇದೆ ಎಂದು ಸಾಕ್ಷಿ ದಾಖಲಾತಿಯ ಪ್ರತಿಯನ್ನು ನ್ಯಾಯಾಲಯಕ್ಕೆ ತೋರಿಸಿರುತ್ತಾರೆ . ನಾನು ತಂದಿರುವ ದಾಖಲಾತಿ ಜರೆಕ್ಸ ಪ್ರತಿ ಎಂದರೆ ಸರಿ . ನಾನು ತಂದಿರುವ ದಾಖಲಾತಿಯಲ್ಲಿ ಈ ಪ್ರಕರಣದಲ್ಲಿರುವ ಅಂಚೆಗೆ ಸಂಬಂಧಪಟ್ಟಂತೆ ನಮೂದು ಇಲ್ಲ ಎಂದರೆ ಸಾಕ್ಷಿ ಒಂದೊಂದೆ ಆರ್ಟಿಕಲ್ ಬಗ್ಗೆ ನಮೂದು ಇಲ್ಲ ಆದರೆ ಜನೇವರಿ 2019 ರಿಂದ ಡಿಸೆಂಬರ 2019 ರವರೆಗೆ ನಮೂದಿದೆ ಎಂದು ನುಡಿದಿರುತ್ತಾರೆ. ಜನೇವರಿ 2019 ರಿಂದ ಡಿಸೆಂಬರ 2019 ರ

ಎಲ್ಲಾ ಕಾಗದ ಪತ್ರಗಳನ್ನು ಹೆಡ್ ಆಫೀಸ್ ಗೆ ಕಳುಹಿಸಿದ ಬಗ್ಗೆ ನಮೂದಿದೆ . ನಾವು ಹೆಡ್ ಆಫೀಸ್ ಗೆ ಕಳಿಸಿದ ದಾಖಲಾತಿಗಳು ಹೆಡ್ ಆಫೀಸ್ ನಲ್ಲಿ ಇರುತ್ತವೆ ಎಂದರೆ ಸರಿ .

5. ಚಂದಾವರ ಪೋಸ್ಟ ಆಫೀಸ್ ಗೆ ಕಂಪ್ಯೂಟರ್ 2015 ರಲ್ಲಿ ಬಂದಿರಬಹುದು, ನಿಖರವಾಗಿ ಗೊತ್ತಿಲ್ಲ. ಈ ಅಂಚೆಯನ್ನು ರಿಡೈರೆಕ್ಟ ಮಾಡಿದ್ದೆವು ಎಂಬ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಮೂರು ವರ್ಷದ ದಾಖಲಾತಿಯನ್ನು ರೆಕಾರ್ಡಗೆ ಕಳಿಸಿದ್ದರಿಂದ ನಮ್ಮ ಬಳಿ ದಾಖಲಾತಿ ಇಲ್ಲ ಎಂದು ನುಡಿದಿರುತ್ತಾರೆ . ಸಾಕ್ಷಿ ಪುನಃ ತಮ್ಮ ಕೈಯಲ್ಲಿರುವ ಜರೆಕ್ಸ ಪ್ರತಿಯನ್ನು ತೋರಿಸಿ ಇದೆ ದಾಖಲಾತಿ ಎಂದು ನುಡಿದಿರುತ್ತಾರೆ . ಸದರಿ ನಾನು ತೋರಿಸುತ್ತಿರುವ ದಾಖಲಾತಿಯಲ್ಲಿ ಈ ಪ್ರಕರಣದಲ್ಲಿರುವ ಅಂಚೆಯನ್ನು ರಿಡೈರೆಕ್ಟ ಮಾಡಿದ ಬಗ್ಗೆ ಎಲ್ಲಿದೆ ಎಂದು ಆರೋಪಿ ಪರ ವಕೀಲರು ಪ್ರಶ್ನಿಸಲಾಗಿ ಸಾಕ್ಷಿ ಮೂರು ವರ್ಷದ ದಾಖಲಾತಿಯನ್ನು ನಾವು ರೆಕಾರ್ಡಗೆ ಕಳಿಸಿದ್ದೇವೆ ಎಂದು ನುಡಿದಿರುತ್ತಾರೆ .ನಾನು ಈ ದಿನ ತೆಗೆದುಕೊಂಡು ಬಂದಿರುವ ದಾಖಲಾತಿಯ ಜರೆಕ್ಸ ಪ್ರತಿಯನ್ನು ಅಂಚೆಯನ್ನು ರಿಡೈರೆಕ್ಟ ಮಾಡಿದ ಬಗ್ಗೆ ನಮೂದಿಲ್ಲ ಎಂದರೆ ಸಾಕ್ಷಿ ಅದು ರೆಕಾರ್ಡ ಗೆ ಹೋಗಿದೆ ಹೇಗೆ ತೋರಿಸುವುದು ಎಂದು ನುಡಿದಿರುತ್ತಾರೆ . ಸದರಿ ದಾಖಲಾತಿಯ ಮೂಲ ಪ್ರತಿಯನ್ನು ನಾನು ತರಲು ಆಗುವುದಿಲ್ಲ , ಅದು ಸಂಬಂಧಪಟ್ಟ ಅಧಿಕಾರಿಗಳ ಬಳಿಗೆ ಇರುತ್ತವೆ . ಈಗ ನಾನು ಕಾರವಾರದ ಹೆಡ್ ಪೋಸ್ಟ ಆಫೀಸ್ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ . ನಾನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಬರುವಾಗ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ನೋಡಿ ಬಂದಿರುವುದಿಲ್ಲ ಎಂದರೆ ಸರಿ , ಸಾಕ್ಷಿ ದಾಖಲಾತಿ ಕುಮಟಾ ಹೆಡ್ ಆಫೀಸ್ ನಲ್ಲಿ ಇದೆ . ನಾನು ಕಾರವಾರ ಹೆಡ್ ಆಫೀಸ್ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದು ನುಡಿದಿರುತ್ತಾರೆ .

6. ಒಂದು ಅಂಚೆಯನ್ನು ಕಳಿಸಿದಾಗ ಅದರಲ್ಲಿ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಪಿನ್ ಕೋಡ್ ನ್ನು ಸ್ಪಷ್ಟವಾಗಿ ನಮೂದಿಸಬೇಕಾಗುತ್ತದೆ ಎಂದರೆ ಸರಿ . ಯಾವ ಪೋಸ್ಟ

ವ್ಯಾಪ್ತಿಗೆ ಪೋಸ್ಟನ್ನು ಕಳುಹಿಸುತ್ತಿದ್ದಾರೆ ಪಿನ್ ಕೋಡ್ ನಮೂದಿಸಬೇಕಾಗುತ್ತದೆ . ನಿಪಿ-4 ರಲ್ಲಿರುವ ವಿಳಾಸ ವಿದ್ಯಾ ನಾಗೇಶ ಶೇಟ್ W/o ನಾಗೇಶ ಶೇಟ್ , ಉದ್ಯೋಗ ನೌಕರಿ ರೇಲ್ವೆ ಇಲಾಖೆ , ಎಸ್ ಎಸ್ ಎ/ಪಿ ಡಬ್ಲೂ/ಎವಾಯ್/ಧಾರವಾಡ ಮಾಗೋಡ ಸ್ಟೇಷನ್ ಎಂದು ಇದ್ದಾಗ ಅದು ಚಂದಾವರ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿ . ಅದು ಧಾರವಾಡ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ . ಧಾರವಾಡದಲ್ಲಿ ಚಂದಾವರ ಊರು ಇರುವ ಬಗ್ಗೆ ನನಗೆ ಗೊತ್ತಿಲ್ಲ . ಒಂದು ಅಂಚೆ ರಜಿಸ್ಟರ ಪೋಸ್ಟನ್ನು ಕಳಿಸಿದಾಗ ಪೋಸ್ಟನ್ನು ಕಳಿಸಿದವರಿಗೆ ವಾಪಸ್ಸು ಕಳುಹಿಸುವಾಗ ಆ ಅಂಚೆ ಕಚೇರಿಯ ಸೀಲ್ ಬೀಳುತ್ತದೆ ಎಂದರೆ ಸರಿ . ನಮ್ಮ ಚಂದಾವರ ಪೋಸ್ಟ ವ್ಯಾಪ್ತಿಗೆ ಬಂದಿರುವ ಅಂಚೆ ರಿರ್ಟನ್ ಹೋದಾಗ ಸೀಲು ಪೋಸ್ಟಲ್ ಕವರನ ಹಿಂಬದಿಯಲ್ಲಿ ಇರುತ್ತದೆ . ಆರ್ ಕೆ ನಂಬರ ನಮೂದು ಇರುತ್ತದೆ ಎಂದರೆ ಸರಿ . ಇದೇ ಆರ್ ಕೆ ನಂಬರಿಗೆ ಇದು ಸಂಬಂಧಪಟ್ಟದ್ದು ಎಂದು ನಿಪಿ -6 ಅಂಚೆ ಸ್ವೀಕೃತಿಯಲ್ಲಿ ಆರ್ ಕೆ ನಂಬರ ನಮೂದಾಗಿದ್ದು ಇಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಅಂಚೆ ಸ್ವೀಕೃತಿಯಲ್ಲಿ ಆರ್ ಕೆ ನಂಬರ ಬರೆಯಬೇಕೆಂದು ಇಲ್ಲ ಎಂದು ನುಡಿದಿರುತ್ತಾರೆ . ಆರ್ ಕೆ ನಂಬರ ಇದ್ದಲ್ಲಿ ಮಾತ್ರ ಇದು ಇದೇ ರಸೀದಿಗೆ ಸಂಬಂಧಪಟ್ಟಿದ್ದು ಎಂದು ಸ್ಪಷ್ಟವಾಗುತ್ತದೆ ಎಂದರೆ ಸಾಕ್ಷಿ ನಮ್ಮ ಪೋಸ್ಟ ಆಫೀಸ್ ಪ್ರಕಾರ ಆರ್ ಕೆ ನಂಬರನ್ನು ಅಂಚೆ ಸ್ವೀಕೃತಿಯಲ್ಲಿ ಬರೆಯುವುದಿಲ್ಲ ಎಂದು ನುಡಿದಿರುತ್ತಾರೆ . ಒಂದು ರಜಿಸ್ಟರ್ ಅಂಚೆ ಹೋದಾಗ ಯಾವ ದಿನ ಸ್ವೀಕಾರ ಆಯಿತು ಎಂದು ದಿನಾಂಕವನ್ನು ನಮೂದಿಸುತ್ತಾರೆ ಎಂದರೆ ಸಾಕ್ಷಿ ಕೈಯಲ್ಲಿ ಬರೆಯುವುದಿಲ್ಲ ಸೀಲ್ ಹಾಕುತ್ತೇವೆ ಎಂದು ನುಡಿದಿರುತ್ತಾರೆ . ಸದರಿ ಅಂಚೆ ಸ್ವೀಕೃತಿಯಲ್ಲಿರುವ ಸೀಲು ನಾನು ಕೊಟ್ಟದ್ದಲ್ಲ ಕಾರಣ ಯಾವ ದಿನಾಂಕದಂದು ಸ್ವೀಕೃತಿಯಾಗಿದೆ ಹೇಳಲು ಬರುವುದಿಲ್ಲ . ಸೀಲನ್ನು ನೋಡಿ ಯಾವ ದಿನಾಂಕದಂದು ಸ್ವೀಕೃತಿಯಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ . ಅಂಚೆ ಸ್ವೀಕೃತಿಯನ್ನು ಯಾರು ನೀಡಿದ್ದಾರೆ ಅವರೇ ಯಾವ ದಿನಾಂಕದಂದು ಅಂಚೆ ತಲುಪಿದೆ ಎಂದು ಹೇಳಲು ಸೂಕ್ತ ವ್ಯಕ್ತಿ ಎಂದರೆ ಸರಿ . ಈ ದಾಖಲೆಯಲ್ಲಿ ಎಲ್ಲೂ ಕೂಡ ಚಂದಾವರಕ್ಕೆ ಬಂದಿತ್ತು ಎಂದು ಯಾವುದೇ ದಾಖಲಾತಿ ಇಲ್ಲ ಎಂದರೆ

ನಾವು ಅಂಚೆ ಸ್ವೀಕೃತಿಯ ಮೇಲೆ ಯಾವುದೇ ಬರವಣಿಗೆ ಮಾಡುವುದಿಲ್ಲ ಕೇವಲ ಪೋಸ್ಟಲ್ ಕವರ ಮೇಲೆ ನಮೂದು ಮಾಡುತ್ತೇವೆ ಎಂದು ನುಡಿದಿರುತ್ತಾರೆ .

7. ಸಾಕ್ಷಿಗೆ ಒಂದು ಅಂಚೆ ಕವರನ್ನು ತೋರಿಸಲಾಗಿ ಅದು ಅವರ ಅಂಚೆ ಕಚೇರಿಯಿಂದ ಹೋಗಿರುವ ರಜಿಸ್ಟರ ಪೋಸ್ಟ ಎಂದರೆ ಸಾಕ್ಷಿ ಹೌದು ಎಂದು ನೋಡಿ ಗುರುತಿಸಿರುತ್ತಾರೆ . ಸದರಿ ದಾಖಲಾತಿಯನ್ನು ನಿಡಿ-3 ಎಂದು ಗುರುತಿಸಲಾಯಿತು . ಸದರಿ ದಾಖಲಾತಿ addressee left without intimation return sender ಎಂದು ವಾಪಸ್ಸಾಗಿದೆ ಎಂದರೆ ಸಾಕ್ಷಿ ಯಾವುದೋ ಒಂದು ಲೇಟರ ತೆಗೆದುಕೊಂಡು ಬಂದು ನನ್ನ ಬಳಿ ಮಾಹಿತಿ ಕೇಳುತ್ತಿದ್ದಾರೆ ಎಂದು ನುಡಿದಿರುತ್ತಾರೆ . ಈ ರೀತಿ ಬಂದಿರುವ ದಾಖಲಾತಿಯಲ್ಲಿ acknowledgment ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಅದರಲ್ಲಿ ರಿಟರ್ನ ಪಾವತಿ ಇದೆ ಎಂದು ಸಾಕ್ಷಿ ನುಡಿದಿರುತ್ತಾರೆ . ನಮ್ಮ ಪೋಸ್ಟ ಆಫೀಸ್ ರೂಲ್ಸ ಪ್ರಕಾರ ಯಾವುದೇ ಒಂದು ಆರ್ಟಿಕಲ್ ನ್ನು ನಾವು ರಿಟರ್ನ ಮಾಡುತ್ತೇವೆ ಎಂದಾಗ acknowledgment ಬೇರ್ಪಡಿಸಿ ಕವರ ಮಾತ್ರ ಕಳುಹಿಸಿಕೊಡುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ . ಸದರಿ acknowledgment ನ್ನು ನಿಡಿ-4 ಎಂದು ಗುರುತಿಸಲಾಯಿತು . ಹೀಗೆ ನಮ್ಮ ಪೋಸ್ಟನವರ ತಪ್ಪಿನಿಂದ ಬಂದಂತಹ acknowledgment ಗೆ ನಂತರ ಚಂದಾವರ, ಹೊನ್ನಾವರ ಎಂದು ಬರೆದಿರುವ ದಾಖಲಾತಿ ಎಂದರೆ ಸಾಕ್ಷಿ ನಾನು ಒಪ್ಪುವುದಿಲ್ಲ, ಆ ರೀತಿ ನಮ್ಮ ಡಿಪಾರ್ಟಮೆಂಟ್ ನಲ್ಲಿ ಯಾರು ಮಾಡುವುದಿಲ್ಲ ಎಂದು ನುಡಿದಿರುತ್ತಾರೆ . ಈ ಅಂಚೆಗೆ ಸಂಬಂಧಪಟ್ಟಂತೆ ಕಾರವಾರ ಹೆಡ್ ಆಫೀಸ್ ಅಥವಾ ಕುಮಟಾ ಹೆಡ್ ಆಫೀಸ್ ನಿಂದ ದಾಖಲಾತಿ ತರಿಸಲು ಅಭ್ಯಂತರವಿದೆಯಾ ಎಂದರೆ ಸಾಕ್ಷಿ ನನ್ನಿಂದ ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ . ಅಂತಹ ಯಾವುದೇ ದಾಖಲಾತಿ ಇಲ್ಲದ್ದರಿಂದ ಸಾಧ್ಯವಿಲ್ಲ ಎಂದು ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನಿಪಿ-6 ಚಂದಾವರಕ್ಕೆ ಬಂದಿದ್ದು ಇಲ್ಲ ಎಂದರೆ ಸಾಕ್ಷಿ ಬಂದದ್ದು ಇಲ್ಲ ಎಂದು ನಾನು ಹೇಳುವುದಿಲ್ಲ ಎಂದು ನುಡಿದಿರುತ್ತಾರೆ . ಒಂದುವೇಳೆ ಚಂದಾವರ ಪೋಸ್ಟಗೆ

ಪಿಡಬ್ಲೂಃ 3

ಬಂದಿದ್ದರೆ ಅದರ ಮೇಲೆ ಚಂದಾವರ ಪೋಸ್ಟನ ಸೀಲು ಇರುತ್ತಿತ್ತು ಎಂದರೆ ಸಾಕ್ಷಿ ಪರತ್ ಪಾವತಿ ಮೇಲೆ ನಾವು ಸೀಲು ಹೊಡೆಯುವುದಿಲ್ಲ , ಅಂಚೆ ಲಕೋಟೆಯ ಹಿಂದುಗಡೆ ಸೀಲು ಹೊಡೆಯುತ್ತೇವೆ ಎಂದು ನುಡಿದಿರುತ್ತಾರೆ . ನಮ್ಮ ಊರಿನಲ್ಲಿರುವವರು ವಿದ್ಯಾ ನಾಗೇಶ ಶೇಟ್ ಎಂದರೆ ನಾಗೇಶ ಶೇಟ್ ರವರ ಮಗಳು ಎಂದರೆ ಸರಿ . ಅಂಚೆ ಸ್ವೀಕೃತಿ ಅಸ್ಪಷ್ಟವಾಗಿದ್ದಾಗ ಪಿನ್ ಕೋಡ್ ಇಲ್ಲದೇ ಇದ್ದಾಗ ಅವರ ಫೋನ್ ನಂಬರಗೆ ಫೋನ್ ಮಾಡಿ ಈಗಿನ ವಿಳಾಸ ತಿಳಿದುಕೊಳ್ಳಬಹುದು ಎಂದರೆ ಸಾಕ್ಷಿ ನಾವು ಅವರ ಮನೆಗೆ ಹೋಗುತ್ತೇವೆ , ಅವರ ಮನೆಯಲ್ಲಿ ಯಾರು ಇರುತ್ತಾರೆ ಅವರ ಬಳಿ ಮಾಹಿತಿ ಕೇಳುತ್ತೇವೆ ಎಂದು ನುಡಿದಿರುತ್ತಾರೆ . ನಾವು ರಿಡೈರೆಕ್ಟ ಮಾಡಿದ ನಂತರ ಚಂದಾವರ ಪೋಸ್ಟ ಮಾಸ್ತರ ಕೂಡ ನಮೂದು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ನಾವು ಅಂಚೆ ಲಕೋಟೆಯ ಹಿಂದುಗಡೆಗೆ ನಮೂದು ಮಾಡಿ ಕಳುಹಿಸುತ್ತೇವೆ . ಪೋಸ್ಟ ಮಾಸ್ತರ ಅಂಚೆ ಲಕೋಟೆಯ ಮುಂಭಾಗದಲ್ಲಿ ನಮೂದು ಮಾಡುತ್ತಾರೆ ಎಂದು ನುಡಿದಿರುತ್ತಾರೆ . ನಮ್ಮ ಪ್ರಕಾರ ಈ ಅಂಚೆಯನ್ನು 2019 ರಲ್ಲಿ ಯಾರು ಪೋಸ್ಟಮೆನ್ ಆಗಿದ್ದರೋ ಅವರು ಸದರಿ ಅಂಚೆಯನ್ನು ತಲುಪಿಸಿರುತ್ತಾರೆ . ಈ ಅಂಚೆಗೆ ಸಂಬಂಧಪಟ್ಟಂತೆ ಸಾಕ್ಷಿ ನುಡಿಯಲು ಅವರೇ ಸೂಕ್ತ ವ್ಯಕ್ತಿ ಎಂದರೆ ಸರಿ . ನಾನು ಫಿರ್ಯಾದು ಬ್ಯಾಂಕಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.